ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ದಿನ ಬಹುಶಃ ಮುಖ್ಯಮಂತ್ರಿಗಳೇ ಪಶ್ಚಾತ್ತಾಪ ಪಡಬೇಕಾಗುತ್ತದೆ. ಎಲ್ಲಾ 224 ಜನ ಶಾಸಕರು, ಇವತ್ತು ಇಲ್ಲಿರುವಂಥವರು ಆ ಕಡೆ ಇರಬಹುದು ಬದಲಾವಣೆಯಾಗಬಹುದು. ಆದರೆ ಮುಂದೆ ಏನು ಮೇಲ್ಪಂಕ್ತಿ ಹಾಕುತ್ತೇವೆ ಎನ್ನುವುದು ಬಹಳ ಮುಖ್ಯವಾದುದು. ಆದ್ದರಿಂದ ಚುನಾಯಿತ ಪ್ರತಿನಿಧಿಗಳಿಗೆ ಒಂದು ಅಪಮಾನ ಮಾಡಿದರೆ ಅದು ನಮಗೆ ಆದ ಅಪಮಾನ ಅಲ್ಲ. ನಮ್ಮನ್ನು ಆಯ್ಕೆ ಮಾಡಿದ ಕಳುಹಿಸಿದ ಜನರಿಗೆ ಮಾಡಿದ ಅಪಮಾನ ಆಗಬಹುದು, ಇದು ಸರ್ವಾಧಿಕಾರಿ ನೀತಿ ಆಗಬಹುದು. ಎಂದು ಜನ ಭಾವಿಸಬಹುದು. ಆ ಕಳಂಕಕ್ಕೆ ತಾವು ಗುರಿಯಾಗಬಾರದು ಎಂಬ ಭಾವನೆ ಇಟ್ಟು ಹೇಳಿದ್ದೇವೆ. ಆದರೆ ತಾವು ಏನೋ ಒಂದು ಗಟ್ಟಿ ಮನಸ್ಸು ಮಾಡಿದ್ದೀರಿ. ತಾವು ಏನು ಬೇಕಾದರೂ ಮಾಡಬಹುದು. ನಾವು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದೇವೆ. ಮತ್ತೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯ ಬರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಮಾತಿಗೂ ಮನ್ನಣೆ ಇಲ್ಲ ಅಂದರೆ,. ಇದು ಅನಿವಾರ್ಯ. ಅದಕ್ಕೆ ನಾವೆಲ್ಲರೂ ಕೂಡ ನಮ್ಮ ಪಕ್ಷದ ವತಿಯಿಂದ ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ಬಹಳ ಅಪಾರವಾದ ಗೌರವ ಇದೆ. ಅದರ ಬಗ್ಗೆ ಬೇರೆ ಮಾತೇ ಇಲ್ಲ.

ಅಧ್ಯಕ್ಷರು : ಶ್ರೀ ಜಯಚಂದ್ರರವರದ್ದು ಒಂದು ಪ್ರಶ್ನೆ ಇದೆ. ಅವರೊಬ್ಬರನ್ನು ಬಿಟ್ಟು ಉಳಿದವರು.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷ, ಕಾಂಗ್ರೆಸ್(ಐ), ಕರ್ನಾಟಕ ಕಾಂಗ್ರೆಸ್ ಪಕ್ಷ, ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ಸದಸ್ಯರೆಲ್ಲರೂ ಸಭೆಯಿಂದ ಹೊರಗೆ ನಡೆದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ : ತುಮಕೂರು ಜಿಲ್ಲಾ ಸಾಕ್ಷರತಾ ಆಂಧೋಲನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 96(390)

ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ತುಮಕೂರು ಜಿಲ್ಲೆ ಸಾಕ್ಷರತಾ ಆಂದೋಲನದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸಾಕ್ಷರತೆಗೆ ಸಂಬಂಧಿಸಿದಂತೆ ಒಟ್ಟು ಮುದ್ರಿತವಾದ ಹೊತ್ತಿಗೆಗಳು : ಪುಸ್ತಕಗಳು ಎಷ್ಟು?

ಅವುಗಳನ್ನು ಯಾರು ಯಾರಿಗೆ ಹಂಚಲಾಗಿದೆ? ಹಂಚಿದವರು ಯಾರು? ಪಡೆದುಕೊಂಡವರು ಯಾರು? ಹಾಗೂ ಪಡೆದುಕೊಂಡ ಒಟ್ಟು ಪುಸ್ತಕಗಳು : ಹೊತ್ತಿಗೆಗಳ ಸಂಖ್ಯೆ ಎಷ್ಟು? ಯಾವ ಯಾವ ದಿನಾಂಕಗಳಲ್ಲಿ ಹಂಚಲಾಗಿದೆ? (ಈ ಬಗ್ಗೆ ಪೂರ್ಣ ವಿವರ ನೀಡುವುದು)